‘ನೋಡಿ ಯೋಚನೆ ಮಾಡಿ... ಎಲ್ಲದಕ್ಕೂ ಒಂದು ಪರಿಹಾರ ಅಂತ ಇರುತ್ತಲ್ಲ’ ಅಂತ ಹೇಳುತ್ತ ಎದುರಿಗೆ ತಟ್ಟೆಯಲ್ಲಿದ್ದ ಸೇಬನ್ನು ಎತ್ತಿಕೊಂಡು ಮೊದೀನ್‌ಗೆ ಕೊಡುತ್ತ ಭೇಟಿ ಮುಗಿಯಿತು ಎನ್ನುವ ಸೂಚನೆ ಕೊಟ್ಟರು. ಎರಡೂ ಕೈಚಾಚಿ ಅವರಿಂದ ಹಣ್ಣು ಪಡೆದುಕೊಂಡ ಮೊದೀನ್ ಕೈ ಜೋಡಿಸಿ, ತಲೆ ಬಗ್ಗಿಸಿ ನಮಸ್ಕಾರ ಮಾಡಿ ಹೊರಕ್ಕೆ ಬಂದ.

ಮೊದೀನ್‌ಗೆ ಅಂಗಡಿಗೆ ಹೋಗಲು ಮನಸ್ಸಿಲ್ಲದೆ ಮನೆಗೆ ಹೋದ. ಒಂದು ಗಂಟೆ ಹೊತ್ತಿಗೆ ಊಟಕ್ಕೆ ಬರುತ್ತಿದ್ದ ಅವನು ಮನೆಗೆ ಬಂದಾಗ ಮೂರು ಗಂಟೆ ಆಗಿತ್ತು. ಗಂಡನ ಮುಖದಲ್ಲಿ ಏನೋ ಚಿಂತೆ ಇರುವುದನ್ನು ಅವನ ಹೆಂಡತಿ ಗುರುತಿಸಿದಳು. ಹಣ್ಣನ್ನು ಹೆಂಡತಿಗೆ ಕೊಡುತ್ತ, ‘ಸ್ವಾಮಿಗಳು ಕೊಟ್ಟರು’ ಅಂದ. ಊಟ ಆದ ಮೇಲೆ ಸ್ವಲ್ಪ ಹೊತ್ತು ಮಲಗುತ್ತಿದ್ದವನು ಆವತ್ತು ಮಲಗಲಿಲ್ಲ. ಕಪಾಟಿನ ಬೀಗ ತೆಗೆದು ಜಮೀನಿನ ಪತ್ರಗಳನ್ನು ತೆಗೆದ.

1949ರಲ್ಲಿ ಮೈಸೂರು ಸರ್ಕಾರದ ಕಂದಾಯ ಮತ್ತು ಒಳಾಡಳಿತ ಇಲಾಖೆಗಳ ಹುಜೂರ್ ಕಾರ್ಯದರ್ಶಿಯವರ ಆದೇಶದ ಮೇರೆಗೆ ಹೊಸಳ್ಳಿ ಗ್ರಾಮಠಾಣಕ್ಕೆ ಸೇರಿದ ಎರಡು ಎಕರೆ ಬೆದ್ದಲು ಭೂಮಿಯನ್ನು ಸ್ವಾತಂತ್ರ್ಯ ಹೋರಾಟಗಾರ ಇಮಾಂ ಹುಸೇನ್ ಸಾಬರಿಗೆ ಮುಫತ್ತಾಗಿ ಮಂಜೂರು ಮಾಡಲಾಗಿದೆ ಎಂಬ ಒಕ್ಕಣೆಯ ಮೋಡಿ ಅಕ್ಷರಗಳ ಸರ್ಕಾರಿ ಆದೇಶ ಪತ್ರ ಮತ್ತು ಹನ್ನೆರಡಾಣೆ ಮುಖಬೆಲೆಯ ಮೈಸೂರು ರಾಜರ ಚಿತ್ರ ಮತ್ತು ಗಂಡಭೇರುಂಡ ಪಕ್ಷಿಯ ಲಾಂಛನವಿದ್ದ ಛಾಪಾ ಪೇಪರಿನಲ್ಲಿ ರಿಜಿಸ್ಟರು ಮಾಡಿಕೊಟ್ಟಿದ್ದ ಪತ್ರ ನೋಡಿದ ಮೇಲೆ ಅವನಿಗೆ ಸಮಾಧಾನವಾಯಿತು.

ಎಷ್ಟೇ ಕಷ್ಟ ಬಂದರೂ ಇಮಾಂಸಾಬರು ಭೂಮಿ ಮಾರಲಿಲ್ಲ. ಬಟ್ಟೆ ಹೊಲಿದೇ ಜೀವನ ಮಾಡಿದರು. ಚೆನ್ನಾಗಿ ಮಳೆ ಬಿದ್ದ ವರ್ಷ ಸಾಗುವಳಿ ಮಾಡಿಸುತ್ತಿದ್ದರು. ಜೋಳ, ಸಜ್ಜೆ, ಕಡಲೆಕಾಯಿ ಇತ್ಯಾದಿ ಬೆಳೆಯುತ್ತಿದ್ದರು. ಬರುಬರುತ್ತ ಮಳೆ ಕಡಿಮೆಯಾಗಿ ಸಾಗುವಳಿ ನಿಲ್ಲಿಸಿದ್ದರು. ‘ಎಷ್ಟು ದಿನ ಅಂತ ಬಟ್ಟೆ ಹೊಲಕಂಡ್ ಜೀವ್ನ ಮಾಡ್ತೀಯಾ? ಹೊಲದಲ್ಲಿ ಒಂದು ಬಾವಿ ತೆಗೆಸಿ ಬೇಸಾಯ ಮಾಡಬಾರದೇ’ ಅಂತ ಊರವರು ಕೊಡುತ್ತಿದ್ದ ಸಲಹೆಗೆ ಇಮಾಂಸಾಬರು ಏನನ್ನೂ ಹೇಳುತ್ತಿರಲಿಲ್ಲ.

ಎಷ್ಟೇ ಕಷ್ಟ ಬಂದರೂ ಜಮೀನು ಮಾರಬೇಡ ಅಂತ ಇಮಾಂ ಸಾಬರು ಸಾಯುವ ಮೊದಲು ಮಗನಿಗೆ ಹೇಳಿದ್ದರು. ಊರಲ್ಲಿ ಇದ್ದದ್ದು ನಮ್ಮದೊಂದೇ ಮನೆ. ಈಗ ಎರಡಾಗಿವೆ. ಊರವರ ಇಷ್ಟಕ್ಕೆ ವಿರುದ್ಧವಾಗಿ ಹೋಗಬೇಡ. ನಿನ್ನ ತಮ್ಮಂದಿರೂ ಹೋಗದಂತೆ ನೋಡಿಕೊಳ್ಳೊ ಜವಾಬ್ದಾರಿ ನಿನ್ನದು ಅಂತಲೂ ಹೇಳಿದ್ದರು.

ಅಪ್ಪ ಸ್ವಾತಂತ್ರ್ಯ ಹೋರಾಟಗಾರರು ಅನ್ನೋ ಹೆಮ್ಮೆ ಮೊದೀನ್‌ಗೆ. ಮೂರು ತಿಂಗಳು ಇಮಾಂ ಸಾಬರು ಬಳ್ಳಾರಿ ಜೈಲಿನಲ್ಲಿ ಶಿಕ್ಷೆ ಅನುಭವಿಸಿದ್ದರು. ನಿಜಲಿಂಗಪ್ಪ, ಕಾಮರಾಜ್, ರಾಜಾಜಿ, ಎನ್.ಜಿ. ರಂಗಾ ಮೊದಲಾದವರೆಲ್ಲ ಆಗ ಅದೇ ಜೈಲಿನಲ್ಲಿ ಇದ್ದರು ಅಂತ ಅಂಗಡಿಗೆ ಬಂದು ಕೂರುತ್ತಿದವರ ಎದುರು ಸಮಯ ಸಿಕ್ಕಾಗಲೆಲ್ಲ ಮೊದೀನ್ ಹೇಳುತ್ತಿದ್ದ. ಅದನ್ನು ಕೇಳಿಸಿಕೊಂಡ ಕೆಲವರಿಗೆ ನಿಜಲಿಂಗಪ್ಪ ಅವರ ಹೆಸರು ಮಾತ್ರ ಗೊತ್ತಿತ್ತು. ಉಳಿದವರು ಯಾರೆಂದು ಕೇಳದೆ ಸುಮ್ಮನೆ ಕೇಳಿಸಿಕೊಳ್ಳುತ್ತಿದ್ದರು.

ಇಮಾಂ ಸಾಬರ ಮಕ್ಕಳಿಗೆ ಇರೋದೇ ಅಂಗೈ ಅಗಲದಷ್ಟು ಜಮೀನು. ಅದರ ಮೇಲೂ ಈಗ ಮಠದವರ ಕಣ್ಣು ಬಿದ್ದಿದೆ. ಸ್ವಾಮಿಗಳು ಅದನ್ನು ಸ್ಕೂಲಿಗೆ ಕೊಡು ಅಂತಿದ್ದಾರೆ. ಕೊಡಲ್ಲ ಅಂತ ಹೆಂಗೆ ಹೇಳೋದು? ಕಾನೂನು ನಮ್ಮ ಕಡೆಗೇ ಇದ್ದರೂ ಮಠದವರನ್ನು ಎದುರು ಹಾಕಿಕೊಳ್ಳೋಕೆ ಆಗುತ್ತಾ? ಹೊಲ ಕೊಟ್ಟಮೇಲೆ ಈ ಊರಲ್ಲಿ ಯಾಕಿರಬೇಕು ಅಂತ ಅವನಿಗೆ ಅನ್ನಿಸುತ್ತಿತ್ತು. ಹೊಲದಲ್ಲಿ ಅಪ್ಪ ಅಮ್ಮ, ಚಿಕ್ಕಪ್ಪ ಚಿಕ್ಕಮ್ಮರ ಸಮಾಧಿಗಳಿವೆ ಅಂದರೂ ಅದಕ್ಕೆ ಪರಿಹಾರ ಇದೆ